# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್ ರಸ್ತೆ, ತುಮಕೂರು -572103

ಸಂಖ್ಯೆ:ತುವಿ:ಶೈವಿ:PG-ADM:2026-27/2452 ದಿನಾಂಕ:30.09.2026

**ಪ್ರವೇಶಾತಿ ಅಧಿಸೂಚನೆ**

**ವಿಷಯ: 2026-27ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕಾನೂನು (ಎಲ್.ಎಲ್.ಎಂ) ಮತ್ತು ವಿವಿಧ ಪಿಜಿ ಡಿಪ್ಲೋಮಾ ಕೋರ್ಸ್‌ಗಳಿಗೆ ಅರ್ಜಿಯನ್ನು ಆಹ್ವಾನಿಸುವ ಕುರಿತು.**

**ಉಲ್ಲೇಖ: ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:30.09.2026 (ಕಂಡಿಕೆ-37)**

*****

2026-27 ನೇ ಶೈಕ್ಷಣಿಕ ಸಾಲಿಗೆ ಕರ್ನಾಟಕ ವ್ಯಾಪ್ತಿಯಲ್ಲಿನ ಹಾಗೂ ಅನ್ಯ ರಾಜ್ಯಗಳ ವಿಶ್ವವಿದ್ಯಾನಿಲಯಗಳಿಂದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯಲ್ಲಿ ತೇರ್ಗಡೆ ಹೊಂದಿದ ಅರ್ಹ ಅಭ್ಯರ್ಥಿಗಳಿಂದ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕಾನೂನು(ಎಲ್.ಎಲ್.ಎಂ), ಪಿಜಿ ಡಿಪ್ಲೋಮಾ ಇನ್ ಜೈನ್ ಸ್ಟಡೀಸ್, ಡಿಪ್ಲೋಮಾ ಇನ್ ಎಪಿಗ್ರಫಿ ಸ್ಟಡೀಸ್, ಪಿಜಿ ಡಿಪ್ಲೋಮಾ ಇನ್ ಎನ್ವಿರಾನ್‌ಮೆಂಟಲ್ ಸಸ್ಟೈನಬಲಿಟಿ ಅಂಡ್ ಗೌರ್ನೆನ್ಸ್ ಮತ್ತು ಪಿಜಿ ಡಿಪ್ಲೋಮಾ ಇನ್ ಅಕ್ಯಾಡೆಮಿಕ್ ರೈಟಿಂಗ್ ಅಂಡ್ ಪಬ್ಲಿಷಿಂಗ್ ಕೋರ್ಸ್‌ಗಳ ಪ್ರವೇಶಾತಿಗೆ **UUCMS** ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.(ಡಿಪ್ಲೋಮಾ ಇನ್ ಎಪಿಗ್ರಫಿ ಸ್ಟಡೀಸ್‌ಗೆ **Manual** ಅರ್ಜಿಯನ್ನು ವಿ.ವಿ ವೆಬ್‌ಸೆಟ್ ಮುಖಾಂತರ ಪಡೆದು ಅರ್ಜಿ ಸಲ್ಲಿಸುವುದು)

- ಪ್ರವೇಶ ಬಯಸುವ ಅಭ್ಯರ್ಥಿಗಳು **UUCMS** ಮೂಲಕ ಅರ್ಜಿ ಸಲ್ಲಿಸುವುದು.(link https://uucms.karnataka.gov.in/) (ಅರ್ಜಿ ಶುಲ್ಕ ರೂ. 300-00 (ಪ.ಜಾ/ಪ.ಪಂ/ಸಿ-1 ರೂ.150-00) (ಡಿಪ್ಲೋಮಾ ಇನ್ ಎಪಿಗ್ರಫಿ ಸ್ಟಡೀಸ್ ಹೊರತುಪಡಿಸಿ)
- ಒಂದಕ್ಕಿಂತ ಹೆಚ್ಚು ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು ಪ್ರತ್ಯೇಕ ಅರ್ಜಿ ಸಲ್ಲಿಸುವುದು.(ಪ್ರತ್ಯೇಕ ಅರ್ಜಿ ಶುಲ್ಕ ಪಾವತಿಸಬೇಕು)
- ವಿವಿಧ ಕೋರ್ಸ್‌ಗಳ ಪ್ರವೇಶಾತಿಯನ್ನು ಕೌನ್ಸಿಲಿಂಗ್ ಮುಖಾಂತರ ನಡೆಸಲಾಗುವುದು. ಪ್ರವೇಶಾತಿಯ ಮೀಸಲಾತಿಯನ್ನು ಸರ್ಕಾರದ ಆದೇಶದನ್ವಯ ಕ್ರಮವಹಿಸಲಾಗುವುದು.
- ಯಾವುದೇ ಕೋರ್ಸಿಗೆ 10 ವಿದ್ಯಾರ್ಥಿಗಳಿಗಿಂತ ಕಡಿಮೆ ಪ್ರವೇಶವಾದಲ್ಲಿ ಅಂತಹ ಕೋರ್ಸ್‌ಗಳನ್ನು ನಡೆಸಲಾಗುವುದಿಲ್ಲ.

Omnibus merit list ನ್ನು ವಿಶ್ವವಿದ್ಯಾನಿಲಯದ ಅಂತರ್ಜಾಲ www.tumkuruniversity.ac.in ನಲ್ಲಿ ಹಾಗೂ ಸಂಬಂಧಪಟ್ಟ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು.

ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಾತಿಯ ತಾತ್ಕಾಲಿಕ ದಿನಾಂಕಗಳ ವಿವರ:

| | |
|---|---|
| **UUCMS / MANUAL** ಮೂಲಕ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ | **01.10.2026** |
| **UUCMS** ಮೂಲಕ ಭರ್ತಿ ಮಾಡಿದ ಅರ್ಜಿಯನ್ನು (ಮುದ್ರಿತ) ಅಗತ್ಯ ದಾಖಲೆಗಳೊಂದಿಗೆ ಸಂಬಂಧಿಸಿದ ವಿಭಾಗಗಳಿಗೆ ಸಲ್ಲಿಸಲು ಕೊನೆಯ ದಿನಾಂಕ (ಎಪಿಗ್ರಫಿ ಸ್ಟಡೀಸ್‌ಗೆ ಮ್ಯಾನ್ಯುಯಲ ಅರ್ಜಿ) | **17.10.2026** |
| **PROVISIONAL OMNIBUS MERIT LIST** ನ್ನು ಪ್ರಕಟಿಸುವ ದಿನಾಂಕ | **19.10.2026** |
| ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ | **21.10.2026** |
| ಅಂತಿಮ **OMNIBUS MERIT LIST** ನ್ನು ಪ್ರಕಟಿಸುವ ದಿನಾಂಕ | **22.10.2026** |
| ಕೋರ್ಸ್‌ಗಳ ಕೌನ್ಸಿಲಿಂಗ್ ದಿನಾಂಕ ( ವಿಭಾಗ ಹಂತದಲ್ಲಿ ಕೌನ್ಸಿಲಿಂಗ್ ನಡೆಯುವುದು) | **23.10.2026** |
| ತರಗತಿಗಳು ಪ್ರಾರಂಭವಾಗುವ ದಿನಾಂಕ | **Will be informed later** |

**ಸೂಚನೆಗಳು:**

1. ಪ್ರವೇಶಾತಿಗೆ ಸಂಬಂಧಿಸಿದ ಮಾಹಿತಿಯನ್ನು ಪ್ರತ್ಯೇಕವಾಗಿ ಅಭ್ಯರ್ಥಿಗಳಿಗೆ ತಿಳಿಸಲಾಗುವುದಿಲ್ಲ. ಹಂತಹಂತದ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ಅಂತರ್ಜಾಲ ತಾಣ www.tumkuruniversity.ac.in ದಿಂದ ಪಡೆಯುವುದು.
2. ವಿದ್ಯಾರ್ಥಿಗಳು ತಮ್ಮ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಎಲ್ಲಾ ಸೆಮಿಸ್ಟರ್‌ಗಳ ಫಲಿತಾಂಶ ಪ್ರಕಟವಾದ ನಂತರ ಮಾತ್ರವೇ UUCMS ಮೂಲಕ ಸ್ನಾತಕೋತ್ತರ ಪದವಿ ಪ್ರವೇಶಕ್ಕೆ ಅರ್ಜಿ ಸಲ್ಲಿಸತಕ್ಕದ್ದು.
3. ಅರ್ಜಿ ಸಲ್ಲಿಸಲು ಇಚ್ಚಿಸುವ ಅಭ್ಯರ್ಥಿಗಳು UUCMS ಜಾಲತಾಣ https://uucms.karnataka.gov.in/ ಗೆ ಭೇಟಿ ನೀಡಿ, ಲಾಗಿನ್ ಬಟನ್ ಕ್ಲಿಕ್ ಮಾಡಿ, ಲಾಗಿನ್ ಪುಟದಲ್ಲಿ ತಮ್ಮ existing registrationನ್ನು ಬಳಸುವುದು. New Candidate Registrationನ್ನು ಕ್ಲಿಕ್ ಮಾಡಿ ಎಲ್ಲಾ ಅಗತ್ಯ ವಿವರಗಳು ಮತ್ತು ದಾಖಲೆಗಳನ್ನು ಅಪ್‌ಲೋಡ್ ಮಾಡಿ ನೋಂದಣಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು
4. ನೋಂದಣಿ ಪೂರ್ಣಗೊಂಡ ನಂತರ ದೊರೆಯುವ ಅಭ್ಯರ್ಥಿ ಗುರುತಿನ ಸಂಖ್ಯೆ (Candidate ID) ಮತ್ತು ತಾವು ನೀಡಿರುವ ಪಾಸ್‌ವರ್ಡ್‌ನ್ನು ತಪ್ಪದೇ ದಾಖಲಿಸಿಟ್ಟುಕೊಳ್ಳುವುದು(existing uses ಈ ಹಿಂದೆ UG/pi candidate ID ಅನ್ನು ಬಳಸುವುದು.

ಪು.ತಿ.ನೋ

5. LLM / ಪಿಜಿ ಡಿಪ್ಲೋಮಾ ಇನ್ ಜೈನ್ ಸ್ಟಡೀಸ್, ಡಿಪ್ಲೋಮಾ ಇನ್ ಎಪಿಗ್ರಫಿ ಸ್ಟಡೀಸ್, ಪಿಜಿ ಡಿಪ್ಲೋಮಾ ಇನ್ ಎನ್ವಿರಾನ್‌ಮೆಂಟಲ್ ಸಸ್ಟೈನಬಲಿಟಿ ಅಂಡ್ ಗೌರ್ನೆನ್ಸ್ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಸಲ್ಲಿಸುವಾಗ ಸ್ನಾತಕ ಪದವಿಯ ಎಲ್ಲಾ ಸೆಮಿಸ್ಟರ್‌ಗಳ ಅಂಕಗಳನ್ನು ಕಡ್ಡಾಯವಾಗಿ ನಮೂದಿಸಿ ಅರ್ಜಿ ಸಲ್ಲಿಸುವುದು. ಪದವಿ ಅಂಕಗಳನ್ನು ತಪ್ಪಾಗಿ/ಅಪೂರ್ಣವಾಗಿ ನಮೂದಿಸಿ ಅರ್ಜಿ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
6. ಪಿಜಿ ಡಿಪ್ಲೋಮಾ ಇನ್ ಅಕ್ಯಾಡೆಮಿಕ್ ರೈಟಿಂಗ್ ಅಂಡ್ ಪಬ್ಲಿಷಿಂಗ್ ಕೋರ್ಸಿಗೆ ಅರ್ಜಿ ಸಲ್ಲಿಸುವಾಗ ಸ್ನಾತಕೋತ್ತರ ಪದವಿಯ ಎಲ್ಲಾ ಸೆಮಿಸ್ಟರ್‌ಗಳ ಅಂಕಗಳನ್ನು ಕಡ್ಡಾಯವಾಗಿ ನಮೂದಿಸಿ ಅರ್ಜಿ ಸಲ್ಲಿಸುವುದು. ಪದವಿ ಅಂಕಗಳನ್ನು ತಪ್ಪಾಗಿ/ಅಪೂರ್ಣವಾಗಿ ನಮೂದಿಸಿ ಅರ್ಜಿ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
7. ಒಂದು ಪದವಿಗೆ ಒಂದು ಬಾರಿ ಮಾತ್ರ ಅರ್ಜಿಯನ್ನು ಸಲ್ಲಿಸಲು ಅವಕಾಶವಿದೆ. ಆದ್ದರಿಂದ ಅಭ್ಯರ್ಥಿಗಳು ತಾವು ಅರ್ಜಿ ಸಲ್ಲಿಸಬೇಕಾಗಿರುವ ವಿಭಾಗ / ಕೋರ್ಸ್‌ನ್ನು ಮೊದಲೇ ನಿರ್ಧರಿಸಿಕೊಂಡು ಅನಂತರ ಅರ್ಜಿ ಸಲ್ಲಿಕೆ ಪ್ರಕ್ರಿಯೆಯನ್ನು ಪ್ರಾರಂಭಿಸುವುದು.
8. ಅಭ್ಯರ್ಥಿಯು ತಮ್ಮ ನೋಂದಣಿ ಗುರುತಿನ ಸಂಖ್ಯೆ (Candidate ID) ಮತ್ತು ಪಾಸ್‌ವರ್ಡನ್ನು ಬಳಸಿ UUCMS ಜಾಲತಾಣಕ್ಕೆ ಲಾಗಿನ್ ಮಾಡಿ Create/View Application > Create Application ಆಯ್ಕೆ ಬಳಸಿ, ನಂತರ Academic Year – 2026-27, Program Level – PG, University Name – Tumkur University ಹಾಗೂ Program Name ಕಾಲಂನಲ್ಲಿ ತಾವು ಪ್ರವೇಶ ಬಯಸುವ ಪದವಿಯನ್ನು ಆಯ್ಕೆ ಮಾಡಿ ಸಲ್ಲಿಸುವುದು.
9. ನಂತರ ಬರುವ ಸ್ಕ್ರೀನ್‌ನಲ್ಲಿ Add row ಬಟನ್ ಕ್ಲಿಕ್ ಮಾಡಿ, ಮೊದಲು Discipline ಆಯ್ಕೆ ಮಾಡಿ Priority-1 ರಿಂದ Priority-5ರವರೆಗೆ ತಮ್ಮ ಆದ್ಯತೆಯ ಅನುಸಾರ ವಿವಿ ಸ್ನಾತಕೋತ್ತರ ವಿಭಾಗ (Tumkur University Main Campus) ನಂತರ Preview & Submit ಬಟನ್ ಕ್ಲಿಕ್ ಮಾಡಿ ಅರ್ಜಿ ಸಲ್ಲಿಸುವುದು.
10. ಒಂದು ನಿರ್ದಿಷ್ಟ ಕೋರ್ಸಿಗೆ ಅರ್ಜಿ ಸಲ್ಲಿಸಬೇಕಾದಲ್ಲಿ (ಉದಾ: ಕಾನೂನು(ಎಲ್.ಎಲ್.ಎಂ), ಪಿಜಿ ಡಿಪ್ಲೋಮಾ ಇನ್ ಜೈನ್ ಸ್ಟಡೀಸ್, ಡಿಪ್ಲೋಮಾ ಇನ್ ಎಪಿಗ್ರಫಿ ಸ್ಟಡೀಸ್, ಪಿ.ಜಿ. ಡಿಪ್ಲೋಮಾ ಇನ್ ಎನ್ವಿರಾನ್‌ಮೆಂಟಲ್ ಸಸ್ಟೈನಬಲಿಟಿ ಅಂಡ್ ಗೌರ್ನೆನ್ಸ್ ಮತ್ತು ಪಿಜಿ. ಡಿಪ್ಲೋಮಾ ಇನ್ ಅಕ್ಯಾಡೆಮಿಕ್ ರೈಟಿಂಗ್ ಅಂಡ್ ಪಬ್ಲಿಷಿಂಗ್ ಕೋರ್ಸ್‌ಗಳ ಪ್ರವೇಶಾತಿಗೆ ಅರ್ಜಿ ಸಲ್ಲಿಸಬೇಕಾದಲ್ಲಿ) ಸೂಚನೆ 7 ರಲ್ಲಿ ತಿಳಿಸಿರುವಂತೆ ಮೊದಲು Program Name ನ್ನು ಆಯ್ಕೆ ಮಾಡಿ, ನಂತರ ಬರುವ ಸ್ಕ್ರೀನ್‌ನಲ್ಲಿ Add row ಬಟನ್ ಕ್ಲಿಕ್ ಮಾಡಿ, ಒಂದೊಂದಾಗಿ Discipline ಆಯ್ಕೆ ಮಾಡಿ Priority-1 ರಿಂದ Priority-5ರವರೆಗೆ ತಮ್ಮ ಆದ್ಯತೆಯ ಅನುಸಾರ ವಿವಿ ಸ್ನಾತಕೋತ್ತರ ವಿಭಾಗ (Tumkur University Main Campus) ಅಥವಾ ಇತರೆ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳುವುದು. ಹೀಗೆ ಎಲ್ಲಾ Discipline ಗಳನ್ನು ಆಯ್ಕೆ ಮಾಡಿ Priority selection ಮಾಡಿದ ನಂತರ Preview & Submit ಬಟನ್ ಕ್ಲಿಕ್ ಮಾಡಿ ಅರ್ಜಿ ಸಲ್ಲಿಸುವುದು.
11. ಮೇಲೆ ತಿಳಿಸಿದಂತೆ ಅರ್ಜಿ ಸಲ್ಲಿಸಿದ ನಂತರ ನಿಗದಿಪಡಿಸಿದ ಅರ್ಜಿ ಶುಲ್ಕವನ್ನು SB Collect ಮೂಲಕ ಮಾತ್ರ FINANCE OFFICER, TUMKUR UNIVERSITY (E-TAX) ಖಾತೆಗೆ ಪಾವತಿಸಿ, ರಸೀದಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. ಯಾವುದೇ ಕಾರಣಕ್ಕೂ ಅರ್ಜಿ ಶುಲ್ಕವನ್ನು UUCMS ನಲ್ಲಿರುವ linkನ್ನು ಬಳಸಿ ಪಾವತಿಸುವಂತಿಲ್ಲ. ಒಂದು ವೇಳೆ ಈ ರೀತಿಯಲ್ಲಿ ಪಾವತಿಸಿದರೆ ಆಗುವ ತಾಂತ್ರಿಕ ತೊಂದರೆಗಳಿಗೆ ಅಭ್ಯರ್ಥಿಗಳೇ ನೇರ ಜವಾಬ್ದಾರರಾಗಿರುತ್ತಾರೆ.
12. ಮೇಲೆ ತಿಳಿಸಿದಂತೆ ಅರ್ಜಿ ಶುಲ್ಕ ಪಾವತಿಸಿದ ನಂತರ ಮತ್ತೊಮ್ಮೆ Create/View Application > View existing Application Details ಆಯ್ಕೆ ಬಳಸಿ, View ಲಿಂಕ್ ಮೇಲೆ ಕ್ಲಿಕ್ ಮಾಡಿ, Offline ಆಯ್ಕೆಯನ್ನು ಬಳಸಿ ಅರ್ಜಿ ಶುಲ್ಕ ಪಾವತಿಸಿದ ರಸೀದಿಯನ್ನು ಅಪ್‌ಲೋಡ್ ಮಾಡುವುದು. ಅರ್ಜಿ ಶುಲ್ಕ ಅಪ್‌ಲೋಡ್ ಮಾಡಿದಲ್ಲಿ ಮಾತ್ರ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪೂರ್ಣಗೊಳ್ಳುವುದು.
13. ಮೇಲ್ಕಂಡ ಎಲ್ಲಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ ನಂತರ ಅರ್ಜಿ ಹಾಗೂ ಅರ್ಜಿ ಶುಲ್ಕ ಪಾವತಿ ರಸೀದಿಯ ಮುದ್ರಿತ ಪ್ರತಿಯನ್ನು ಎಲ್ಲಾ ದಾಖಲೆಗಳೊಂದಿಗೆ (ಅಂಕಪಟ್ಟಿಗಳು, ಜಾತಿ/ಆದಾಯ ಪ್ರಮಾಣ ಪತ್ರ, ಆಧಾರ್, ಇತ್ಯಾದಿ) ಸಂಬಂಧಪಟ್ಟ ಸ್ನಾತಕೋತ್ತರ ಅಧ್ಯಯನ ವಿಭಾಗಕ್ಕೆ ಸಲ್ಲಿಸುವುದು.
14. ಪ್ರವೇಶಾತಿ ಶುಲ್ಕ, ಸಿಟ್ ಮ್ಯಾಟ್ರಿಕ್ಸ್, ಪ್ರವೇಶಾತಿ ಅರ್ಹತೆ ಹಾಗೂ ವಿಭಾಗಗಳಿಗೆ ಸಂಬಂಧಿಸಿದ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ಅಂತರ್ಜಾಲ ತಾಣ www.tumkuruniversity.ac.in ದಿಂದ ಪಡೆಯುವುದು.
15. ಪಿಜಿ.ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಯಾವುದೇ ವಿದ್ಯಾರ್ಥಿವೇತನಗಳಿಗೆ ಅರ್ಹರಾಗಿರುವುದಿಲ್ಲ.
16. ಬೇರೆ ಸ್ನಾತಕೋತ್ತರ ಕೋರ್ಸ್‌ನ್ನು ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು PG Diploma in Coconut plantation & prossesing, PG Diploma in academic writing and publishing & Diploma in Epigraphy studies ಕೋರ್ಸ್‌ಗಳಿಗೆ ಪ್ರವೇಶ ಪಡೆದರೆ (Add on course), ಅಂತಹ ವಿದ್ಯಾರ್ಥಿಗಳಿಗೆ ಹಾಜರಾತಿಗೆ ಧಕ್ಕೆಯಾಗದಂತೆ Flexicable curriculm delivery ನೀಡಲು ಹಾಗೂ ಅಂತಹ ವಿದ್ಯಾರ್ಥಿಗಳಿಗೆ ಪ್ರಸ್ತುತ ಡಿಪ್ಲೋಮಾ ಕೋರ್ಸಿಗೆ ನಿಗದಿಪಡಿಸಿರುವ ಪ್ರವೇಶಾತಿ ಶುಲ್ಕದಲ್ಲಿ ಶೇ.25 ರಷ್ಟು ವಿನಾಯಿತಿ ನೀಡಲಾಗುವುದು.

ಆದೇಶದ ಮೇರೆಗೆ
(sd/-) 1/9/26
ಉಪಕುಲಸಚಿವರು ಮ.ತಿ.ನೋ
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಪ್ರತಿಗಳು:

1. ಕುಲಸಚಿವರು (ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಡೀನರು ಕಲಾ/ ವಾಣಿಜ್ಯ ಮತ್ತು ನಿರ್ವಹಣೆ/ ವಿಜ್ಞಾನ ಮತ್ತು ತಂತ್ರಜ್ಞಾನ /ಕಾನೂನು ನಿಕಾಯಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರು/ ಸಂಯೋಜನಾಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ಪ್ರಾಂಶುಪಾಲರುಗಳು, ಘಟಕ ಮತ್ತು ಸಂಯೋಜಿತ ಸ್ನಾತಕೋತ್ತರ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
7. ಉಪಕುಲಸಚಿವರು, ಪರೀಕ್ಷಾಂಗ/ ಸಾಮಾನ್ಯ ಮತ್ತು ಅಭಿವೃದ್ಧಿ/ ಸಿಬ್ಬಂದಿ/ ಕಾನೂನು ಕೋಶ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
8. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸುವುದು.
9. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
10. ಕಚೇರಿ ಪತಿ